# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1025 (1253)
2. ಸದಸ್ಯರ ಹೆಸರು : ಶ್ರೀ ದಿನೇಶ್ ಗೂಳಿಗೌಡ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 19.12.2024
4. ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಕಾವೇರಿ ಜಲಾನಯನ ಪ್ರದೇಶದಲ್ಲಿ ಬರುವ ಅಣೆಕಟ್ಟುಗಳು ಎಷ್ಟು; ಪ್ರಸ್ತುತ ಈ ಜಲಾನಯನ ವ್ಯಾಪ್ತಿಯಲ್ಲಿನ ಅಣೆಕಟ್ಟುಗಳಲ್ಲಿನ ನೀರಿನ ಪ್ರಮಾಣ ಎಷ್ಟಿದೆ; ಅಣೆಕಟ್ಟುಗಳ ಸುರಕ್ಷತೆ ಹಾಗೂ ದುರಸ್ತಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು: (ಸಂಪೂರ್ಣ ವಿವರ ನೀಡುವುದು) | ಕಾವೇರಿ ಜಲಾನಯನ ಪ್ರದೇಶದಲ್ಲಿ ಜಲಸಂಪನ್ಮೂಲ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 4 ಬೃಹತ್ ನೀರಾವರಿ ಅಣೆಕಟ್ಟುಗಳು ಹಾಗೂ 17 ಮಧ್ಯಮ ನೀರಾವರಿ ಅಣೆಕಟ್ಟುಗಳಿದ್ದು, ದಿನಾಂಕ:10.12.2024 ರಂತೆ ಅಣೆಕಟ್ಟೆಗಳಲ್ಲಿರುವ ನೀರಿನ ಪ್ರಮಾಣದ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.<br>ರಾಷ್ಟ್ರೀಯ ಅಣೆಕಟ್ಟು ಸುರಕ್ಷತಾ ಕಾಯ್ದೆ-2021ರನ್ವಯ, ಸ್ಥಾಪಿಸಲಾಗಿರುವ ಅಣೆಕಟ್ಟು ಸುರಕ್ಷತಾ ಘಟಕಗಳು ಅಣೆಕಟ್ಟುಗಳ ಸುರಕ್ಷತೆಗಾಗಿ ನಿರ್ವಹಣೆ ಮತ್ತು ದುರಸ್ಥಿ ಒಳಗೊಂಡಂತೆ ಅಗತ್ಯವಿರುವ ಕ್ರಮಗಳನ್ನು ಕಾಲಕಾಲಕ್ಕೆ ಕೈಗೊಳ್ಳುತ್ತಾರೆ. ಅಣೆಕಟ್ಟು ಸುರಕ್ಷತಾ ಘಟಕಗಳು ಕೇಂದ್ರ ಜಲ ಆಯೋಗದ ಮಾರ್ಗಸೂಚಿಯನ್ವಯ ವಾರ್ಷಿಕವಾಗಿ ಮುಂಗಾರು ಪೂರ್ವ ಹಾಗೂ ಉತ್ತರ ಮುಂಗಾರು (Pre-Monsoon and Post-Monsoon) ಅಣೆಕಟ್ಟುಗಳ ಪರಿವೀಕ್ಷಣೆಗಳನ್ನು ಕೈಗೊಳ್ಳುತ್ತಿರುತ್ತಾರೆ.<br>ಇದಲ್ಲದೆ, ಅಣೆಕಟ್ಟು ಸುರಕ್ಷತಾ ಸಂಸ್ಥೆಯಡಿ ಸರ್ಕಾರದಿಂದ ರಚಿಸಲಾಗಿರುವ ಅಣೆಕಟ್ಟು ಸುರಕ್ಷತಾ ಪರಿಶೀಲನಾ ಸಮಿತಿಯು ಮತ್ತು ತಂಡಗಳು ((Dam Safety Review Panel **(DSRP)** & Dam Safety Review Team **(DSRT)**) ಕೇಂದ್ರ ಜಲ ಆಯೋಗದ ಮಾರ್ಗ ಸೂಚಿಗಳನ್ವಯ ಅಣೆಕಟ್ಟುಗಳ ಪರಿವೀಕ್ಷಣೆಯನ್ನು ಕೈಗೊಳ್ಳುತ್ತಿರುತ್ತಾರೆ. |
| ಆ) | ಪ್ರಸಕ್ತ ವರ್ಷ ಈ ಜಲಾನಯನ ಪ್ರದೇಶದಿಂದ ತಮಿಳುನಾಡಿಗೆ ಎಷ್ಟು ಟಿ.ಎಂ.ಸಿ ನೀರು ಬಿಡಲಾಗಿದೆ; ಎಷ್ಟು ಟಿ.ಎಂ.ಸಿ. ಬಿಡಬೇಕಿತ್ತು; ಹೆಚ್ಚುವರಿಯಾಗಿ ಎಷ್ಟು ಟಿಎಂಸಿ ನೀರು ಬಿಡುಗಡೆ ಮಾಡಲಾಗಿದೆ; | ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿನಾಂಕ:16.02.2018ರ ಆದೇಶದ ಮೇರೆಗೆ ವಾರ್ಷಿಕವಾಗಿ (ಜೂನ್ 1 ರಿಂದ ಮೇ 31 ರವರೆಗೆ) 177.25 TMC ನೀರನ್ನು ಕರ್ನಾಟಕ ರಾಜ್ಯದ ಕಾವೇರಿ ಜಲಾನಯನದ ಜಲಾಶಯಗಳಿಂದ ತಮಿಳುನಾಡಿನ ಬಿಳಿಗುಂಡ್ಲುವಿಗೆ ಹರಿಬಿಡುವುದಾಗಿರುತ್ತದೆ. ಸದರಿ ಮಾಸಿಕವಾರು ನಿಗಧಿ ಪ್ರಮಾಣದನ್ವಯ, ಪ್ರಸಕ್ತ 2024-25ನೇ ಸಾಲಿನ ಜಲ ವರ್ಷದಲ್ಲಿ ಕಾವೇರಿ ಜಲಾನಯನ ಪ್ರದೇಶದಿಂದ ತಮಿಳುನಾಡಿನ ಬಿಳಿಗುಂಡ್ಲುವಿಗೆ ದಿನಾಂಕ:11.12.2024ರಂತೆ ಒಟ್ಟು 159.75 TMC ನೀರು ಬಿಡಬೇಕಾಗಿದ್ದು, ಸದರಿ ದಿನಾಂಕದವರೆಗೆ 275.177 TMC ನೀರು ಹರಿಬಿಡಲಾಗಿದೆ. ಇದರಂತೆ, 115.427 TMC ಹೆಚ್ಚುವರಿಯಾಗಿ ಹರಿಬಿಡಲಾಗಿದೆ. |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಇ) | ಈ ಜಲಾನಯನ ಭಾಗದ ಅಣೆಕಟ್ಟುಗಳ ಗೇಟ್‌ಗಳು ಸುರಕ್ಷಿತವಾಗಿವಿಯೆ; ಅಥವಾ ದುರಸ್ತಿಯಾಗಬೇಕೆ ದುರಸ್ತಿ ಮಾಡಿದ್ದರೆ ಯಾವ ತಂತ್ರಜ್ಞಾನ ಬಳಸಲಾಗಿದೆ; (ಸಂಪೂರ್ಣ ವಿವರಗಳನ್ನು ಒದಗಿಸುವುದು) | ಪ್ರಸ್ತುತ 2024ರ ಪೂರ್ವ ಮುಂಗಾರು (Pre-Monsoon) ವರದಿಗಳನ್ವಯ ಕಾವೇರಿ ಜಲಾನಯನ ಪ್ರದೇಶದಲ್ಲಿನ ಜಲಸಂಪನ್ಮೂಲ ಇಲಾಖಾ ವ್ಯಾಪ್ತಿಯನ ಯಾವುದೇ ಅಣೆಕಟ್ಟುಗಳ ಗೇಟುಗಳು ಹಾನಿಯಾಗಿರುವುದರ ಕುರಿತು ವರದಿಯಾಗಿರುವುದಿಲ್ಲ. ಪ್ರಸ್ತುತ ಸುರಕ್ಷಿತವಾಗಿದ್ದು, ಉತ್ತಮ ಸ್ಥಿತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತವೆ. |
| ಈ) | ಮಂಡ್ಯ ಜಿಲ್ಲೆಯ ಮಳವಳ್ಳಿ, ಮದ್ದೂರು, ಕೊಪ್ಪ ಸೇರಿದಂತೆ ನಾಲೆಯ ಕೊನೆ ಭಾಗಗಳಿಗೆ ಸುಲಲಿತವಾಗಿ ನೀರು ಹರಿಸಲು ನಾಲೆಗಳ ಆಧುನಿಕತೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? (ಸಂಪೂರ್ಣ ವಿವರ ಒದಗಿಸುವುದು) | ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಯಲ್ಲಿನ ಮದ್ದೂರು ವಿಧಾನಸಭಾ ಕ್ಷೇತ್ರದ ಕೊನೆಯ ಭಾಗಗಳ ನಾಲೆಗಳಲ್ಲಿ ಸರಾಗವಾಗಿ ನೀರನ್ನು ಹರಿಸಲು ಕೆಳಕಂಡ ನಾಲೆಗಳ ಆಧುನೀಕರಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.<br>1. ಲೋಕಸಾರ ಶಾಖಾ ನಾಲೆ – ರೂ.22.00 ಕೋಟಿ<br>2. ಕೆಮ್ಮಣ್ಣು ಶಾಖಾ ನಾಲೆ – ರೂ.90.00 ಕೋಟಿ.<br>ಈ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಅನುದಾನ ಲಭ್ಯತೆಯನುಸಾರ ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗುವುದು.<br>ಮದ್ದೂರು, ನಾಗಮಂಗಲ, ಮಳವಳ್ಳಿ ಹಾಗೂ ಟಿ.ನರಸೀಪುರ ವಿಧಾನ ಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಬರುವ ನಾಲೆಗಳ ಆಧುನೀಕರಣ ಮಾಡುವ ಸಲುವಾಗಿ ರೂ.1176.68 ಕೋಟಿ ಮೊತ್ತದ 8 ಅಂದಾಜು ಪಟ್ಟಿಗಳನ್ನು ತಯಾರಿಸಲಾಗಿದ್ದು, ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಅನುದಾನ ಲಭ್ಯತೆಯನುಸಾರ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗುವುದು. ವಿವರಗಳನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |

ಇ-ಸಂಖ್ಯೆ: ಜಸಂಇ 98 ಡಿಎಸ್‌ಪಿ 2024

(ಡಿ.ಕೆ.ಶಿವಕುಮಾರ್)
ಉಪ ಮುಖ್ಯಮಂತ್ರಿ

**ಅನುಬಂಧ-1**

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ದಿನೇಶ್ ಗೂಳಿಗೌಡ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1025 (1253)ಗೆ ಮಾಹಿತಿಗಳು**

ಕಾವೇರಿ ಜಲಾನಯನ ಪ್ರದೇಶದಲ್ಲಿ ಜಲಸಂಪನ್ಮೂಲ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಅಣೆಕಟ್ಟುಗಳ ಗರಿಷ್ಟ ನೀರಿನ ಸಂಗ್ರಹಣಾ ಸಾಮರ್ಥ್ಯ ಹಾಗೂ ಪ್ರಸ್ತುತ ಲಭ್ಯವಿರುವ ನೀರಿನ ಪ್ರಮಾಣದ ವಿವರಗಳು:

**(ದಿನಾಂಕ:10.12.2024 ರಂತೆ)**

| ಕ್ರಮ ಸಂಖ್ಯೆ | ಜಲಾಶಯದ ಹೆಸರು | ಗರಿಷ್ಠ ಸಂಗ್ರಹಣಾ ಸಾಮರ್ಥ್ಯ (ಟಿ.ಎಂ.ಸಿ ಗಳಲ್ಲಿ) | ಪ್ರಸ್ತುತ ಲಭ್ಯವಿರುವ ನೀರಿನ ಪ್ರಮಾಣ* (Live Storage above cill) (ಟಿ.ಎಂ.ಸಿ ಗಳಲ್ಲಿ) |
|---|---|---|---|
| **ಬೃಹತ್ ನೀರಾವರಿ ಯೋಜನೆಗಳು** | | | |
| 1 | ಕೃಷ್ಣರಾಜಸಾಗರ | 49.452 | 45.051 |
| 2 | ಕಬಿನಿ | 19.516 | 13.408 |
| 3 | ಹಾರಂಗಿ | 8.50 | 3.348 |
| 4 | ಹೇಮಾವತಿ | 37.103 | 25.235 |
| **ಮಧ್ಯಮ ನೀರಾವರಿ ಯೋಜನೆಗಳು** | | | |
| 1 | ಕಣ್ವ | 0.808 | 0.399 |
| 2 | ವಾಟೆಹೊಳೆ | 1.510 | 1.270 |
| 3 | ಮಾರ್ಕೋನಹಳ್ಳಿ | 2.400 | 2.259 |
| 4 | ಹೆಬ್ಬಳ್ಳ | 0.432 | 0.254 |
| 5 | ನುಗು | 5.440 | 2.735 |
| 6 | ಚಿಕ್ಕಹೊಳೆ | 0.376 | 0.353 |
| 7 | ಮಂಗಳಾ | 0.530 | 0.464 |
| 8 | ಸುವರ್ಣಾವತಿ | 1.260 | 1.195 |
| 9 | ಗುಂಡಾಲ್ | 0.969 | 0.680 |
| 10 | ನಲ್ಲೂರು ಅಮಾನಿಕೆರೆ | 0.231 | 0.000 |
| 11 | ಯಗಚಿ | 3.603 | 3.221 |
| 12 | ಚಿಕ್ಲಿಹೊಳೆ | 0.184 | 0.170 |
| 13 | ಮಂಚನಬೆಲೆ | 1.122 | 0.841 |
| 14 | ತಾರಕಾ | 3.940 | 2.315 |
| 15 | ಅರ್ಕಾವತಿ | 1.587 | 1.197 |
| 16 | ಇಗ್ಗಲೂರು | 0.182 | 0.107 |
| 17 | ಉಡುತೊರೆ ಹಳ್ಳ | 0.670 | 0.355 |

**ಅನುಬಂಧ-2**

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ದಿನೇಶ್ ಗೂಳಿಗೌಡ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1025 (1253)ಗೆ ಮಾಹಿತಿಗಳು**

ಮದ್ದೂರು, ನಾಗಮಂಗಲ, ಮಳವಳ್ಳಿ ಹಾಗೂ ಟಿ.ನರಸೀಪುರ ವಿಧಾನ ಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಬರುವ ನಾಲೆಗಳ ಆಧುನೀಕರಣ ಪ್ರಸ್ತಾವನೆಗಳ ವಿವರಗಳು:

| ಕ್ರ. ಸಂ. | ವಿಧಾನ ಸಭಾ ಕ್ಷೇತ್ರ | ಕಾಮಗಾರಿ ಹೆಸರು | ಅಂದಾಜು ಮೊತ್ತ (ರೂ. ಕೋಟಿಗಳಲ್ಲಿ) |
|---|---|---|---|
| 1 | Nagamangala | Modernisation of Distributaries & Pickups of Kowdle Sub-Branch Canal & Keragodu Branch Canal under Nagamangala Constituency. | 260.00 |
| 2 | Maddur | Modernisation of Distributaries & Pickups of Keragodu Branch Canal, New Maddur Branch Canal & Lokasara Branch Canal under Maddur Constituency. | 300.00 |
| 3 | T.Narasipura/ Malavalli | Replacement of Existing 1300HP VT pumps, providing trash rack to Head regulator, EOT crane for the maintenance of gate valves & NRVs, servicing and overhauling of air chamber surge protection, CC thrust blocks to 1500mm dia PSC pipe line joints and Construction of protective wall and check dam across the intake seepage valley of Nanjapura LIS. | 20.00 |
| 4 | Malavalli | Modernization of Kirugavalu & Markalu tank canals under TBC in Malavalli taluk. | 32.30 |
| 5 | Malavalli/ Maddur | Modernization of Hebbakavadi Branch Canal an Nidaghatta Branch Canal under Visveswaraya Canal network Phase – II (Balance Length) | 293.47 |
| 6 | Malavalli/ Maddur | ವಿಶ್ವೇಶ್ವರಯ್ಯ ನಾಲಾ ಜಾಲದಡಿಯಲ್ಲಿ ಬರುವ ಹೆಬ್ಬಳ್ಳ ಚನ್ನಯ್ಯ ನಾಲೆಯಡಿಯಲ್ಲಿ ಬರುವ ವಿತರಣಾ ನಾಲೆ ಮತ್ತು ಪಿಕಪ್ ನಾಲೆಗಳ ಅಭಿವೃದ್ಧಿ ಕಾಮಗಾರಿ | 189.66 |
| 7 | Maddur | ಮದ್ದೂರು ತಾಲ್ಲೂಕಿನ ಸೂಳೆಕೆರೆ ಜೀರ್ಣೋದ್ಧಾರ ಕಾಮಗಾರಿ | 34.00 |
| 8 | Maddur | Improvements to Sulekere tank canals | 47.25 |
| | | **TOTAL** | **1176.68** |